<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>S.C.103/2017</u>
<u>S.C.53/2019</u>

ದಿಃ 22.04.2022
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-12 Pw-13

| | | |
|---|---|---|
| ಹೆಸರು | ಃ | ರಾಜಮ್ಮ |
| ಗಂಡನ ಹೆಸರು | ಃ | ಕೇಶವ |
| ವಯಸ್ಸು | ಃ | 45 ವರ್ಷ |
| ಉದ್ಯೋಗ | ಃ | ಖಾಸಗಿ ಕೆಲಸ |
| ವಾಸಸ್ಥಳ | ಃ | ಚಿಕ್ಕಸೋಲೂರು,<br>ಮಾಗಡಿ ತಾಲ್ಲೂಕು |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

ಚಾಸಾ.1 ನನ್ನ ಬಾವ. ಚಾಸಾ.2ರಿಂದ 5ರವರು ಗೊತ್ತಿಲ್ಲ. ಚಾಸಾ.6 ಚಾಸಾ.1ರವರ ಮಗ. ಚಾಸಾ.7ರಿಂದ 10ರವರು ಗೊತ್ತಿಲ್ಲ. ಚಾಸಾ.13 ನನ್ನ ಅಕ್ಕನ ಮಗಳು. ಮೃತ ನವೀನ್ ಕುಮಾರ್ ನನ್ನ ಅಕ್ಕನ ಮಗ. ಆತ ಮೃತಪಟ್ಟಿರುತ್ತಾನೆ. ಯಾವ ಕಾರಣಕ್ಕೆ ಮೃತಪಟ್ಟಿರುತ್ತಾನೆಂದು ಗೊತ್ತಿಲ್ಲ. ಯಾರು ಅವನ ಸಾವಿಗೆ ಕಾರಣ ಎಂದು ಗೊತ್ತಿಲ್ಲ. ನಾನು ಒಂದು ದಿನ ಆತನ ಮನೆಗೆ ಮಧ್ಯಾಹ್ನ 12.00ರಿಂದ 1.00 ಗಂಟೆಗೆ ಹೋಗಿದ್ದೆ. ಆತ ಮನೆಯಲ್ಲಿಯೇ ಇದ್ದ. ನಂತರ ಆತ ಮೃತನಾಗಿರುತ್ತಾನೆಂದು ಎಲ್ಲರೂ

ಹೇಳಿದರು. ಯಾರು ಹೇಳಿದರು ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ನಂತರ ನಾನು ಆತನ ಮೃತದೇಹವನ್ನು ಮನೆಯ ಬಳಿ ತೆಗೆದುಕೊಂಡು ಬಂದಾಗ ನೋಡಿದ್ದೆ. ಆತನಿಗೆ ಎಲ್ಲೆಲ್ಲಿ ಪೆಟ್ಟಾಗಿತ್ತು ಎಂದು ನಾನು ನೋಡಲಿಲ್ಲ. ನಾನು ಪೊಲೀಸರಿಗೆ ಈ ವಿಷಯವಾಗಿ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

ನನಗೀಗ ಓದಿ ಹೇಳಿದ ನಿ.ಪಿ.12 ರಲ್ಲಿನ ಹೇಳಿಕೆಯಂತೆ ಪೊಲೀಸರ ಮುಂದೆ ಮೃತ ನವೀನ್ ಕುಮಾರ್ ಮತ್ತು ಘಟನೆಯ ಬಗ್ಗೆ ಹೇಳಿರುತ್ತೇನೆಂದು ಸೂಚಿಸುವುದು ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ. ಕೆ.ವಿ.ಕೆ., ಮತ್ತು ಎಸ್.ಹೆಚ್.ಎಂ., ವಕೀಲರಿಂದ ಆರೋಪಿಗಳ ಪರವಾಗಿಃ ಇಲ್ಲವೆಂದಿರುತ್ತಾರೆ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)<br>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/<br>ವಿಶೇಷ ನ್ಯಾಯಾಧೀಶರು,<br>ರಾಮನಗರ.